ಹರಡುತ್ತಿದೆ ಎಂದಿದೆ ಒಂದು ಅಧ್ಯಯನ. ದೇಶದ ದಕ್ಷಿಣದ ರಾಜ್ಯಗಳಾದ ಕರ್ನಾಟಕ, ತಮಿಳನಾಡು, ಕೇರಳ ಮತ್ತು ಆಂಧ್ರಪ್ರದೇಶಗಳಲ್ಲಿ ಮಧುಮೇಹ ತೀವ್ರಗತಿಯಲ್ಲಿ ಹರಡುತ್ತದೆ ಎಂಬುದು ಅಧ್ಯಯನದಿಂದ ಬಹಿರಂಗವಾಗಿದೆ. ಈ ರಾಜ್ಯಗಳಲ್ಲಿ ನಗರ ಪ್ರದೇಶಗಳ ಶೇ.20ರಷ್ಟು ಜನರು ಮಧುಮೇಹ ರೋಗಗಳಿಂದ ಬಳಲುತ್ತಿದ್ದರೆ ಗ್ರಾಮೀಣ ಪ್ರದೇಶಗಳಲ್ಲಿ ಶೇ. 10ರಷ್ಟು ಜನರು ಈ ರೋಗಕ್ಕೆ ತುತ್ತಾಗಿದ್ದಾರೆ ಎನ್ನುತ್ತದೆ ಅಧ್ಯಯನ.

## ಡಯಾಬಿಟಿಕ್ ನ್ಯೂರೊಪತಿ

ಮಧುಮೇಹ ದೀರ್ಘಕಾಲ ನಿಯಂತ್ರಣದಲ್ಲಿರದೇ ಇದ್ದರೆ ಪಾದವೂ ಸೇರಿದಂತೆ ಕಾಲುಗಳಲ್ಲಿ ವಿಪರೀತ ಉರಿ, ಬೆಂಕಿ ಬಂದಂತಹ ಅನುಭವ, ಜೋಮು ಹಿಡಿದಂತಾಗುವಂತಹ ಲಕ್ಷಣಗಳುಳ್ಳ ಸಮಸ್ಯೆ ಎದುರಾಗುತ್ತದೆ. ನರಕ್ಕೆ ಸಂಬಂಧಿಸಿದ ಸಮಸ್ಯೆಯಾಗಿರುವುದರಿಂದ ಇದಕ್ಕೆ ವೈದ್ಯಕೀಯ ಪರಿಭಾಷೆಯಲ್ಲಿ ‘ಡಯಾಬಿಟಿಕ್ ನ್ಯೂರೊಪತಿ’ ಎಂದು ಹೆಸರು. ಮಧುಮೇಹ ನಿಯಂತ್ರಣದಲ್ಲಿರದೇ ಇದ್ದರೆ ಹಲವಾರು ಇತರ ಸಮಸ್ಯೆಗಳನ್ನೂ ಎದುರಿಸಬೇಕಾಗುತ್ತದೆ. ಅನಿಯಂತ್ರಿತ ಸಕ್ಕರೆ ಕಾಯಿಲೆ ಇದ್ದಾಗ ಕಾಲು, ಪಾದಗಳಲ್ಲಿ ಉರಿ ಹಾಗೂ ಅತಿಯಾದ ಬಿಸಿಯಾದ ಅನುಭವ ಉಂಟಾಗುತ್ತದೆ. ಇದು ‘ಡಯಾಬಿಟಿಕ್ ನ್ಯೂರೊಪತಿ’ಯ ಲಕ್ಷಣ.

‘ಡಯಾಬಿಟಿಕ್ ನ್ಯೂರೊಪತಿ ಸಾಧಾರಣವಾದ ಆದರೆ ದೀರ್ಘಕಾಲೀನ ಸಮಸ್ಯೆ. ದೀರ್ಘಕಾಲದ ಸಮಸ್ಯೆ ಎದುರಿಸುವವರಲ್ಲಿ ಗ್ಲುಕೋಸ್ ಪ್ರಮಾಣ ನಿಯಂತ್ರಣದಲ್ಲಿ ಇಲ್ಲದಿರುವುದೇ ಡಯಾಬಿಟಿಕ್ ನ್ಯೂರೊಪತಿ ಉಂಟಾಗಲು ಕಾರಣ’ ಎನ್ನುತ್ತಾರೆ ಬೆಂಗಳೂರಿನ ಮಧುಮೇಹ ತಜ್ಞ ಡಾ. ಕುಮಾರಸ್ವಾಮಿ.




ರಕ್ತದಲ್ಲಿನ ಸಕ್ಕರೆ ಮಟ್ಟ ಹೆಚ್ಚಿದ್ದರೆ ಅದು ರೋಗ ನಿರೋಧಕ ಶಕ್ತಿಯನ್ನು ಕುಂದಿಸಿ ಸೋಂಕಿನ ವಿರುದ್ಧ ಹೋರಾಡುವ ಸಾಮರ್ಥ್ಯವನ್ನು ಕಡಿಮೆ ಮಾಡುತ್ತದೆ. ವೈರಸ್ ಇನ್ಸುಲಿನ್ ಉತ್ಪಾದಿಸುವ ಪ್ಯಾಂಕ್ರಿಯಾಸ್ ಕೋಶಗಳ ಮೇಲೆ ವೈರಸ್ ದಾಳಿ ನಡೆಸುತ್ತದೆ. ಹೀಗಾಗಿ ಅನಿಯಂತ್ರಿತ ಮಧುಮೇಹ ಅಪಾಯಕಾರಿ ಮಟ್ಟ ತಲುಪುತ್ತದೆ. ಕೋವಿಡ್–19ಕ್ಕೆ ಪ್ರತಿಕ್ರಿಯಿಸುವ ದೇಹ ‘ಸೈಟೊಕೈನ್’ ಎಂಬ ಕಣಗಳನ್ನು ಬಿಡುಗಡೆ ಮಾಡುವುದರಿಂದ ರಕ್ತದಲ್ಲಿನ ಸಕ್ಕರೆ ಮಟ್ಟ ಜಾಸ್ತಿಯಾಗುತ್ತದೆ. ಇದರಿಂದ ವೈರಸ್ ವಿರುದ್ಧ ಹೋರಾಡಲು ಕಷ್ಟವಾಗುತ್ತದೆ. ರಕ್ತ ಹೆಪ್ಪುಗಟ್ಟಲು ಶುರುವಾಗುವ ಅಪಾಯವೂ ಇದೆ.



* ಅನಿಯಂತ್ರಿತ ಡಯಾಬಿಟಿಸ್ ಇದ್ದವರಿಗೆ ಸತತವಾಗಿ ಇನ್ಸುಲಿನ್ ಇಂಜೆಕ್ಷನ್ ಅಗತ್ಯ ಇದೆಯೇ? ಅಥವಾ ಇದರ ನಿಯಂತ್ರಣಕ್ಕೆ ಇನ್ನಾವುದಾದರೂ ಚಿಕಿತ್ಸೆ ಇದೆಯೇ?

ರಕ್ತದಲ್ಲಿ ಸಕ್ಕರೆ ಪ್ರಮಾಣ ಸಿಕ್ಕಾಪಟ್ಟೆ ಹೆಚ್ಚು ಇದ್ದವರಿಗೆ ಇನ್ಸುಲಿನ್ ಇಂಜೆಕ್ಷನ್ ಶುರು ಮಾಡಿಬಿಟ್ರೆ ಹತೋಟಿಗೆ ಬರುತ್ತೆ ಎನ್ನುವ ಹಾಗೆ ಇಲ್ಲ. ವಾರ ವಾರ ಡೋಸ್ ಅಡ್ಜಸ್ಟ್ ಮಾಡುವುದಕ್ಕಾಗುವುದಿಲ್ಲ. ಗ್ಲುಕೋಸ್ ಮೀಟರ್‌ನಲ್ಲಿ ಚೆಕ್ ಮಾಡಿ ಶುಗರ್ ಜಾಸ್ತಿ ಇದ್ರೆ ಇನ್‌ಸುಲಿನ್ 2 ಯುನಿಟ್ ಜಾಸ್ತಿ ಮಾಡಿ, ಕಡಿಮೆ ಇದ್ರೆ ಎರಡು ಯುನಿಟ್ ಕಮ್ಮಿ ಮಾಡಿ ಎಂದು ಹೇಳ್ತೀವಿ. ಹಾಗೆಂದು ಲೋ ಶುಗರ್ ಆದರೆ ಕೈಕಾಲು ನಡುಗುತ್ತೆ, ಬೆವರುತ್ತೆ, ಹಸಿವಾಗುತ್ತೆ. ಇದು ಹೀಗೇ ಮುಂದುವರೆದರೆ ಫಿಟ್ಸ್ ಬರೋ ಸಾಧ್ಯತೆಯೂ ಇದೆ.

◆ ಟೆಲಿ ಮೆಡಿಸಿನ್ ಎನ್ನುವ ಪರಿಕಲ್ಪನೆ ಇತ್ತೀಚೆಗೆ ಹೆಚ್ಚು ಪ್ರಚಲಿತ ಹಾಗೂ ಜನಪ್ರಿಯವಾಗುತ್ತಿದೆ. ಇದರ ಸಾಧಕ ಬಾಧಕಗಳೇನು?

ಟೆಲಿ ಮೆಡಿಸಿನ್ ಎಂದರೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬರದೆ ಆನ್‌ಲೈನ್‌ನಲ್ಲೇ ಸಲಹೆ, ಚಿಕಿತ್ಸೆ ಪಡೆಯುವುದು. ಟೆಲಿ ಮೆಡಿಸಿನ್‌ಗೆ ಕೇಂದ್ರ ಸರ್ಕಾರ 2020ರಲ್ಲಿ ಅನುಮತಿ ನೀಡಿದೆ. ರೋಗಿಗಳನ್ನು ಇಮೇಲ್ ಅಥವಾ ಇ ಕನ್ಸಲ್ಟೇಷನ್ ಮಾಡುವುದಕ್ಕೆ ಒಪ್ಪಿಗೆ ದೊರೆತಿದ್ದು, ಅದರಿಂದ ಅನೇಕ ರೋಗಿಗಳಿಗೆ ಪ್ರಯೋಜನವಾಗುತ್ತಿದೆ. ವಿಡಿಯೊ ಕನ್ಸಲ್ಟೇಷನ್ ಅಥವಾ ಇ ಕನ್ಸಲ್ಟೇಷನ್‌ನಲ್ಲಿ ಸಿಗ್ನೇಚರ್ ಜೊತೆಗೆ ಪ್ರಿಸ್ಕ್ರಿಪ್ಷನ್ ಬರುತ್ತೆ. ಇದು 20 ವರ್ಷಗಳಿಂದ ಈಚೆಗಿನ ವೈದ್ಯಲೋಕದ ಹೊಸ ಬೆಳವಣಿಗೆ. ಒಂದು ರೀತಿಯಲ್ಲಿ ಟೆಲಿ ಮೆಡಿಸಿನ್ ‘ಆಪ್ತರಕ್ಷಕ’ ಇದ್ದ ಹಾಗೆ.

ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ ಮತ್ತು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ‘ಟೆಲಿ ಮೆಡಿಸಿನ್’ ಬಗ್ಗೆ 40 ಪುಟಗಳ ಮಾರ್ಗಸೂಚಿ ನೀಡಿದೆ. ಡಯಾಬಿಟಿಸ್, ಹೃದ್ರೋಗ, ಏರು ರಕ್ತದೊತ್ತಡ ಇದ್ದವರು ಇ ಕನ್ಸಲ್ಟೇಷನ್ ಮಾಡಬಹುದು ಎಂಬುದನ್ನು ಸೂಚಿಸಿದೆ. ಆದರೆ ತುರ್ತು ಸಂದರ್ಭದಲ್ಲಿ ಇದನ್ನು ಮಾಡುವಂತಿಲ್ಲ ಎಂಬುದನ್ನೂ ಮಾರ್ಗಸೂಚಿಯಲ್ಲಿ ನಮೂದಿಸಲಾಗಿದೆ. ನಾನು ಸಾವಿರಾರು ರೋಗಿಗಳಿಗೆ ಟೆಲಿ ಮೆಡಿಸಿನ್ ಮೂಲಕವೇ ಚಿಕಿತ್ಸೆ ನೀಡುತ್ತಿದ್ದೇನೆ. ರೋಗಿಗಳಿಗೂ ಇದೇ ಕಂಫರ್ಟಬಲ್ ಅನಿಸಿದೆ.

◆ ವೈದ್ಯಜಗತ್ತು ಇಷ್ಟು ಮುಂದುವರಿದರೂ, ಸಕ್ಕರೆ ಕಾಯಿಲೆಗೆ ಅತ್ಯಂತ ಸೂಕ್ತವಾದ ಔಷಧಿ, ಇಂಜೆಕ್ಷನ್‌ಗಳು ಬಂದರೂ, ಭಾರತ ಜಗತ್ತಿನ ಭೂಪಟದಲ್ಲಿ ಎರಡನೇ ದೊಡ್ಡ ಡಯಾಬಿಟಿಕ್ ದೇಶ ಎಂಬ ಹಣೆಪಟ್ಟಿ ಹೊತ್ತುಕೊಂಡಿದೆ. ಇದಕ್ಕೆ ಕಾರಣವೇನು?

ಭಾರತದಲ್ಲಿ ಸುಮಾರು 7.5 ಕೋಟಿ ಜನರಿಗೆ ಮಧುಮೇಹ ಇದೆ. ಜೀವನಶೈಲಿ ಬದಲಾವಣೆಯಿಂದ, ಜಂಕ್ ಆಹಾರ ಸೇವನೆ, ವ್ಯಾಯಾಮದ ಕೊರತೆಯಿಂದ ಈ ಸಂಖ್ಯೆ ಇನ್ನೂ ಹೆಚ್ಚುತ್ತಲೇ ಇದೆ. ಎಲ್ಲರೂ ಸರಿಯಾಗಿ ಡಯಟ್ ಮಾಡಲ್ಲ, ಔಷಧಿ ತಗೊಳ್ಳಲ್ಲ.

ಪ್ರತಿಕ್ರಿಯಿಸಿ: feedback@sudha.co.in